ಕರ್ನಾಟಕ ಸರ್ಕಾರ
ಜಲಾನಯನ ಅಭಿವೃದ್ಧಿ ಇಲಾಖೆ

ವಿಷಯ: ವಿಶ್ವ ಬ್ಯಾಂಕ್ ನೆರವಿನ (ಸುಜಲ- III) ಯೋಜನೆಯಡಿಯಲ್ಲಿ ಯೋಜನಾ ಜಿಲ್ಲೆಗಳಿಗೆ ಸಂಪೂರ್ಣ ಜಲಾನಯನ ಉಪಚಾರ ಕಾರ್ಯಕ್ರಮ ಮತ್ತು ಭೂ ಸಂಪನ್ಮೂಲ ಮಾಹಿತಿ (LRI) ಪ್ರಸರಣೆ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲು ತುಮಕೂರು ಮತ್ತು ದಾವಣಗೆರೆ ಜಿಲ್ಲೆಗಳ ಜಂಟಿ ಕೃಷಿ ನಿರ್ದೇಶಕರಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶಗಳ ಸಂಖ್ಯೆ:ಕೃಇ/61/ಕೃಯೋಕಾ/2019, ದಿನಾಂಕ 13.05.2019 ಮತ್ತು 06.08.2019
2. ಈ ಕಛೇರಿ ಪತ್ರ ಸಂ.ಜ.ಅ.ಇ./ಸುಜಲ-III/Doc & IGA/2018-19/15 ದಿನಾಂಕ:11.01.2019
3. ದಿನಾಂಕ 19.12.2019 ರಂದು ನಡೆದ ಯೋಜನಾ ಜಿಲ್ಲೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಚರ್ಚಿಸಿದಂತೆ

ಪೀಠಿಕೆ:-

ಉಲ್ಲೇಖ(1)ರ ಸರ್ಕಾರದ ಆದೇಶಗಳಂತೆ ವಿಶ್ವಬ್ಯಾಂಕ್ ನೆರವಿನ KWDP-II (ಸುಜಲ-III) EAP ಯೋಜನೆಗೆ ಯೋಜನೆಯ ಲೆಕ್ಕ ಶೀರ್ಷಿಕೆ:2402-00-102-0-28 (ಯೋಜನೆ) ರಡಿ 2019-20ನೇ ಸಾಲಿನಲ್ಲಿ ಮೊದಲ ಮತ್ತು ಎರಡನೆಯ ತ್ರೈಮಾಸಿಕಗಳಿಗೆ ರೂ.25000.00 ಲಕ್ಷಗಳ ಅನುದಾನವನ್ನು ಜಲಾನಯನ ಅಭಿವೃದ್ಧಿ ಇಲಾಖೆಗೆ ಬಿಡುಗಡೆ ಮಾಡಲಾಗಿರುತ್ತದೆ.

ಸುಜಲ-III ಯೋಜನೆಯಡಿ ಉಪ-ಜಲಾನಯನಗಳಲ್ಲಿ ಸಂಪೂರ್ಣ ಜಲಾನಯನ ಉಪಚಾರ ಮತ್ತು ಯೋಜನಾ ವ್ಯಾಪ್ತಿಯಲ್ಲಿನ ಗ್ರಾಮಗಳಲ್ಲಿ ಭೂ ಸಂಪನ್ಮೂಲ ಮಾಹಿತಿ (LRI) ಪ್ರಸರಣೆಗಾಗಿ ಸಂಬಂಧಿತ ರೈತ ಸಂಪರ್ಕ ಕೇಂದ್ರಗಳ ಮೂಲಕ ಒಂದು ದಿನದ ಗ್ರಾಮ ಮಟ್ಟದ ತರಬೇತಿಗಳನ್ನು ಪ್ರತಿ ತರಬೇತಿಗೆ ಗರಿಷ್ಠ ರೂ.10,000/- ವೆಚ್ಚ ಮಿತಿಯಲ್ಲಿ ಆಯೋಜಿಸಲು ಯೋಜನಾ ಜಿಲ್ಲೆಗಳ ಜಂಟಿ ಕೃಷಿ ನಿರ್ದೇಶಕರಿಗೆ ಸೂಚಿಸಲಾಗಿರುತ್ತದೆ (ಉಲ್ಲೇಖ-2).

19.12.2019 ರಂದು ನಡೆದ ಯೋಜನಾ ಜಿಲ್ಲೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ (ಉಲ್ಲೇಖ-3) ಸುಜಲ-III ಯೋಜನೆಯಡಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲಿಸಲಾಗಿ, ಗ್ರಾಮ ಮಟ್ಟದ ತರಬೇತಿಗಳ ಆಯೋಜನೆ, LRI ಕಾರ್ಡ್ ಮುದ್ರಣ ಹಾಗೂ LRI Extension Manager ಸಿಬ್ಬಂದಿ ಪರಿಶ್ರಮಧನ ಪಾವತಿಸಲು ತುಮಕೂರು ಜಿಲ್ಲೆಗೆ ರೂ.3.00 ಲಕ್ಷ (ರೂ ಮೂರು ಲಕ್ಷ ಮಾತ್ರ) ಮತ್ತು ದಾವಣಗೆರೆ ಜಿಲ್ಲೆಗೆ ರೂ.3.56 ಲಕ್ಷ (ರೂ. ಮೂರು ಲಕ್ಷದ ಐವತ್ತಾರು ಸಾವಿರ ಮಾತ್ರ) ಬಿಡುಗಡೆ ಮಾಡುವಂತೆ ಕೋರಲಾಗಿರುತ್ತದೆ.

ಆದಕಾರಣ, ಯೋಜನೆಯಡಿ 2019-20ನೇ ಸಾಲಿನಲ್ಲಿ, ಗ್ರಾಮ ಮಟ್ಟದ ತರಬೇತಿಗಳ ಆಯೋಜನೆ, LRI ಕಾರ್ಡ್ ಮುದ್ರಣ ಮತ್ತು LRI Extension Manager ಸಿಬ್ಬಂದಿ ಪರಿಶ್ರಮಧನ ಪಾವತಿ ವೆಚ್ಚ ಭರಿಸಲು ತುಮಕೂರು ಜಿಲ್ಲೆಗೆ ರೂ.3.00 ಲಕ್ಷ (ರೂ ಮೂರು ಲಕ್ಷ ಮಾತ್ರ) ಮತ್ತು ದಾವಣಗೆರೆ ಜಿಲ್ಲೆಗೆ ರೂ.3.56 ಲಕ್ಷ (ರೂ. ಮೂರು ಲಕ್ಷದ ಐವತ್ತಾರು ಸಾವಿರ ಮಾತ್ರ) ಸೇರಿದಂತೆ ಒಟ್ಟಾರೆ ರೂ.6,56,000/- (ರೂ. ಆರು ಲಕ್ಷದ ಐವತ್ತಾರು ಸಾವಿರ ಮಾತ್ರ) ಅನುದಾನವನ್ನು ಸಂಬಂಧಿತ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಯೋಜನೆಯ ಘಟಕ (3) ಸಾಂಸ್ಥಿಕ ಬಲವರ್ಧನೆ ಅಡಿಯ ಕ್ಷೇತ್ರ ಮಟ್ಟದ ಕಾರ್ಯಕ್ರಮದಡಿ ಬಿಡುಗಡೆ ಮಾಡಲು ಹಾಗೂ ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2402-00-102-0-28 (ಯೋಜನೆ) ಉಪ ಶೀರ್ಷಿಕೆ 051 ರಡಿ (ಉಲ್ಲೇಖ-1) ಭರಿಸಲು ಅನುಮೋದಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**<u>ಕಛೇರಿ ಆದೇಶ ಸಂಖ್ಯೆ:ವಿ.ಬ್ಯಾಂಕ್:ಸುಜಲ-III::ಗ್ರಾ.ಮ.ತ.:ಅ.ಬಿಡುಗಡೆ:2019-20 ದಿನಾಂಕ:30.12.2019</u>**

ಪೀಠಿಕೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ಸುಜಲ-III ಯೋಜನೆಯಡಿ 2019-20ನೇ ಸಾಲಿನಲ್ಲಿ, ಆದಕಾರಣ, ಯೋಜನೆಯಡಿ 2019-20ನೇ ಸಾಲಿನಲ್ಲಿ, ಗ್ರಾಮ ಮಟ್ಟದ ತರಬೇತಿಗಳ ಆಯೋಜನೆ, LRI ಕಾರ್ಡ್ ಮುದ್ರಣ ಮತ್ತು LRI Extension Manager ಸಿಬ್ಬಂದಿ ಪರಿಶ್ರಮಧನ ಪಾವತಿ ವೆಚ್ಚ ಭರಿಸಲು ತುಮಕೂರು ಜಿಲ್ಲೆಗೆ ರೂ.3.00 ಲಕ್ಷ (ರೂ ಮೂರು ಲಕ್ಷ ಮಾತ್ರ) ಮತ್ತು ದಾವಣಗೆರೆ ಜಿಲ್ಲೆಗೆ ರೂ.3.56 ಲಕ್ಷ (ರೂ. ಮೂರು ಲಕ್ಷದ ಐವತ್ತಾರು ಸಾವಿರ ಮಾತ್ರ) ಅನುದಾನವನ್ನು ಸಂಬಂಧಿತ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಯೋಜನೆಯ ಘಟಕ (3) ಸಾಂಸ್ಥಿಕ ಬಲವರ್ಧನೆ ಅಡಿಯ ಕ್ಷೇತ್ರ ಮಟ್ಟದ ಕಾರ್ಯಕ್ರಮದಡಿ ಬಿಡುಗಡೆ ಮಾಡಲು ಹಾಗೂ ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2402-00-102-0-28 (ಯೋಜನೆ) ಉಪ ಶೀರ್ಷಿಕೆ 051 ರಡಿ (ಉಲ್ಲೇಖ-1) ಭರಿಸಲು ಅನುಮೋದಿಸಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಿ ಆದೇಶಿಸಿದೆ.

ಯೋಜನಾ ಜಿಲ್ಲೆಗಳ ಜಂಟಿ ಕೃಷಿ ನಿರ್ದೇಶಕರು ನೀಡಲಾದ ಮಾರ್ಗಸೂಚಿಯಂತೆ ಕಾರ್ಯಚಟುವಟಿಕೆಗಳನ್ನು ಕೈಗೊಂಡು ಪ್ರಗತಿ ವರದಿಯನ್ನು ಕೇಂದ್ರ ಕಛೇರಿಗೆ ತಪ್ಪದೇ ಸಲ್ಲಿಸುವುದು. ಬಿಡುಗಡೆಯಾದ ಅನುದಾನವನ್ನು ಅನುಮೋದಿತ ಕಾರ್ಯಕ್ರಮಗಳಿಗೆ ಮಾತ್ರವೇ ಇಲಾಖಾ ಮಾರ್ಗಸೂಚಿ ಹಾಗೂ ಆರ್ಥಿಕ ನಿಯಮಗಳ ಅನ್ವಯ ವೆಚ್ಚವನ್ನು ಭರಿಸಿ ವೆಚ್ಚ ಪಟ್ಟಿಯನ್ನು ಇಲಾಖೆಗೆ ಸಲ್ಲಿಸುವುದು ಮತ್ತು ಮಾಡಿರುವ ವೆಚ್ಚಕ್ಕೆ ಅನುಗುಣವಾಗಿ ಲೆಕ್ಕಪತ್ರವನ್ನು ನಿರ್ವಹಿಸಿ ತಪಾಸಣೆಗೆ ಒದಗಿಸುವುದು. ಅನುಮೋದಿತ ಕಾರ್ಯಕ್ರಮಗಳನ್ನು ಹೊರತುಪಡಿಸಿ ಇತರೆ ಕಾರ್ಯಕ್ರಮ ಕೈಗೊಂಡಲ್ಲಿ ಸಂಬಂಧಿಸಿದವರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

**ಯೋಜನಾ ನಿರ್ದೇಶಕರು**
ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ-II (ಸುಜಲ-III)
ಮತ್ತು ಆಯುಕ್ತರು,
ಜಲಾನಯನ ಅಭಿವೃದ್ಧಿ ಇಲಾಖೆ
ಬೆಂಗಳೂರು